# ಶಿವಯೋಗ (ಇಷ್ಟಲಿಂಗ ಧ್ಯಾನ) ಪ್ರಾತ್ಯಕ್ಷಿಕೆ

ಚಿತ್ರದುರ್ಗ ಜು. 26 : ನಗರದ ಶ್ರೀಮುರುಘಾಮಠದಲ್ಲಿಂದು (26-7-2020 ಭಾನುವಾರ) ಬೆಳಗ್ಗೆ 8.30ರಿಂದ 9ರವರೆಗೆ ಶಿವಯೋಗ (ಇಷ್ಟಲಿಂಗ ಧ್ಯಾನ) ಪ್ರಾತ್ಯಕ್ಷಿಕೆಯನ್ನು ಫೇಸ್‌ಬುಕ್ ಮತ್ತು ಯುಟ್ಯೂಬ್‌ನಲ್ಲಿ ನೇರಪ್ರಸಾರದಲ್ಲಿ ನಡೆಸಿಕೊಡುತ್ತ ಡಾ. ಶಿವಮೂರ್ತಿ ಮುರುಘಾ ಶರಣರು ಆಶೀರ್ವಚನ ನೀಡಿದರು.



ಶಿವಯೋಗ ಒಂದು ಸುಲಭ ಯೋಗ. ಕಷ್ಟವಿಲ್ಲದೆ ತೊಂದರೆಯಿಲ್ಲದೆ ದುಂದುವೆಚ್ಚವಿಲ್ಲದೆ ಆಡಂಬರವಿಲ್ಲದೆ ಆಚರಿಸುವ ಧ್ಯಾನ ವಿಧಾನವಾಗಿದೆ. ಯಾವುದು ಸರಳವಾಗಿರುತ್ತದೆಯೋ ಅದು ಸುಂದರ, ಅತ್ಯಾಕರ್ಷಕವಾಗಿರುತ್ತದೆ. ಅಂತರ್ಮುಖಿಯಾನಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಮತ್ತೆ ಮತ್ತೆ ಬಹಿರ್ಮುಖಿಯಾಗುವುದು. ಅಂತರ್ಮುಖಿಯಾಗುವುದರಿಂದ ಬದುಕಿನಲ್ಲಿ ಹೊಂದಬಹುದಾದ ಆನಂದದ ಗಳಿಗೆಯನ್ನು ಹೊಂದುತ್ತಾನೆ. ಶಿವಯೋಗದ ಮೂಲಕ ಅಮೃತದ ಸಿಂಚನವಾಗುತ್ತದೆ. ಎಲ್ಲರೂ ಸಿದ್ಧಿಗಾಗಿ ಸ್ನಾನಾದಿಗಳನ್ನು ಮಾಡುತ್ತಾರೆ. ಅದು ಶರೀರದ ಸ್ನಾನ. ಶಿವಯೋಗದ ಮೂಲಕ ಕೊಡುವುದು ಅಂತರಂಗದ ಸಿಂಚನ. ಇದರಲ್ಲಿ ಮೀಯಬೇಕು. ಬಹಿರಂಗದ ನೀರಿನಲ್ಲಿ ದೇಹದ ಮೇಲಿನ ಮಲೀನ ತೊಳೆಯಬಹುದು. ಆದರೆ ಶಿವಯೋಗ ಅಂತರಗಂಗೆ. ಅದು ವ್ಯಕ್ತಿಯನ್ನು ಪಾವನಗೊಳಿಸುತ್ತದೆ ಎಂದು ನುಡಿದರು.

ನಮ್ಮ ಮೆದುಳಿನಲ್ಲಿ ಸಹಸ್ರ ಶಕ್ತಿ ಇದೆ. ಇದನ್ನು ಸಚೇತನಗೊಳಿಸಬೇಕು. ಒಂದು ರೀತಿಯಲ್ಲಿ ಶಿವಯೋಗ ಅಮೃತಧಾರೆ. ಎಲ್ಲರ ಮನೆಗಳಲ್ಲಿ ಒಲೆಗಳು, ಓವನ್‌ಗಳು ಇವೆ. ಒಲೆಯ ಮೇಲೆ ಇಟ್ಟಂತಹ ಹಾಲಿನ ಮಡಕೆಗೆ ಉರಿಯನ್ನು ತಾಕಿಸಿದರೆ ಕಾಯುತ್ತ ಹೋಗುತ್ತದೆ. ತೀವ್ರತರವಾಗಿ ಅಗ್ನಿ ನೀಡುತ್ತ ಹೋದರೆ ಹಾಲು ಕಾಯುತ್ತ ಕಾಯುತ್ತ ನೊರೆಬರಲು ಶುರುವಾಗುತ್ತದೆ. ಅದು ಉಕ್ಕುತ್ತದೆ.

ಬದುಕು ಕೂಡ ಹಾಲಿನಂತೆ ಉಕ್ಕಬೇಕು. ಅಮೃತಧಾರೆ ಉಕ್ಕಬೇಕು. ಅಮೃತಧಾರೆಯಿಂದ ಪ್ರಸನ್ನರಾಗುವ ಸಂದರ್ಭ ಶಿವಯೋಗದಿಂದ ಸಾಧ್ಯವಾಗುತ್ತದೆ. ಶರೀರದ ಶಕ್ತಿ ಇಂದ್ರಿಯ ಗಮನ ಮತ್ತು ಬುದ್ಧಿಶಕ್ತಿಯನ್ನು ಸಹಸ್ರದಳದಲ್ಲಿ ಕೇಂದ್ರೀಕರಿಸಿಕೊಂಡು ಅಂತರ್ಮುಖಿ ಸಾಧನೆಯನ್ನು ಬಸವಾದಿ ಶರಣರು ಮಾಡಿದರು. ಯಾರು ಇದನ್ನು ಮಾಡುತ್ತಾರೋ ಅವರಿಗೆ ದಿವ್ಯತೆಯ ದರ್ಶನವಾಗುತ್ತದೆ.

ಶಿವಯೋಗದಿಂದ ಆಗುವ ಪ್ರಯೋಜನ ಬ್ರಹ್ಮರಂಧ್ರದಿಂದ ಆಗುವ ಅನುಭವ ವಿಭಿನ್ನವಾದುದು. ಸ್ವಾನುಭಾವ ಗಮ್ಯವಾದುದು. ಅಂತರಂಗದ ನಿವೇದನೆಯು ವೇದನೆಯನ್ನು ನಿವಾರಣೆ ಮಾಡುತ್ತದೆ. ಸಂವೇದನೆ ನಮ್ಮದಾಗುತ್ತದೆ. ಸರ್ವಾಂಗವೆಲ್ಲ ಲಿಂಗವಾಗುವ ಸ್ಥಿತಿ ನಮ್ಮದಾಗಬೇಕು. ವೇದನೆಯನ್ನು ನಿವೇದಿಸಿಕೊಂಡಾಗ ಆ ಬದುಕು ವಿಶ್ವಾರ್ಪಣವಾಗುತ್ತದೆ ಮಹಾಲಿಂಗಾರ್ಪಣೆಯಾಗುತ್ತದೆ ಎಂದು ತಿಳಿಸಿದರು.



